ಶ್ರೀ ಎಚ್. ಎಂ. ಚನ್ನಬಸಪ್ಪ.—ಹೊಡೆದರೆ ಅಪರಾಧವಾತ್ತಗುದೆಯೇ ಏನಹಾ...

ಶ್ರೀ ಎಚ್. ಟಿ. ಕೃಷ್ಣಪ್ಪ —ಪ್ರಚೋದನೆ ಮಾಡಿದರಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಚೋದನೆಯನ್ನು ಯಾವ ಸಂದರ್ಭದಲ್ಲಿ ಯಾವ ಭಾಷೆಯಲ್ಲಿ ಯಾವ ಪ್ರಮಾಣದಲ್ಲಿ ಹೇಗೆ ಮಾಡಿದ್ದಾರೆ ಎನ್ನುವುದನ್ನೆಲ್ಲಾ ನೋಡಬೇಕಾಗುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಸ್ಟೇಷನ್ನಿನ ಡೈರಿಯಲ್ಲಿ ಎಂಟ್ರಿ ಇದೆಯಲ್ಲಾ ಅದನ್ನು ಓದಿ ಬಿಡಿರಿ ಗೊತ್ತಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಟೇಷನ್ನಿನ ಡೈರಿ ಇಲ್ಲಿ ಇಲ್ಲ. ಸ್ಟೇಷನ್ನಿನ ಡೈರಿಯಲ್ಲಿ ಏನೋ ಎಂಟ್ರಿ ಮಾಡಿದ್ದಾರೆ ಅದರೆ ಏನು ಮಾಡಿದ್ದಾರೆಂದು ಹೇಳಿಲ್ಲ ಇದು ಮೊದಲನೆಯ ಪಾಯಿಂಟ್ ಆ ಮೇಲೆ ಸಾಮಾನ್ಯವಾಗಿ ಗುಂಪು ಸೇರಿದಾಗ ಎಷ್ಟೋ ಮಾತುಕತೆಗಳು ನಡೆಯುತ್ತವೆ ಆಯಾಯ್ಯಾ ಇನ್ ವೆಸ್ಟಿಗೇಷನ್ ಆಫೀಸರ್ ಮತ್ತು ಪೊಲೀಸ್ ಅಧಿಕಾರಿಗಳು ಯಾವುದು ಅಪರಾಧ, ಯಾವುದು ಅಪರಾಧವಲ್ಲವೆಂದು ನೋಡುತ್ತಾರೆ. ಅವರಿಗೆ ಏನೊಂದು ಅಧಿಕಾರವಿದೆ, ಅವರ ಡಿಸ್ಕ್ರಿಷನ್ ಏನಿದೆ ಎಂದರೆ ಅದರ ಪ್ರಕಾರ ಇವರ ವಿಷಯದಲ್ಲಿ ಮುಂದಂವರಿಯಂತಕ್ಕಂಥದ್ದು ಅನಾವಶ್ಯಕ ಎಂದು ಕಂಡುಬಂದಿರುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಶ್ರೀ ಚನ್ನಬಸಪ್ಪನವರು ವಕೀಲರಾಗಿದ್ದವರು ವಕೀಲಿಗಿರಿ ಮಾಡಿದ್ದಾರೆ, ತಾವು ಈ ರೀತಿ ಹೇಳತಕ್ಕಂಥದ್ದು ಸರಿಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಕೀಲಿಗಿರಿಯನ್ನು ನಾನು ಈಗ ಮಾಡುತ್ತಾ ಇಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಪೋಲಿಸ್ ಸ್ಟೇಷನ್ನಿನಲ್ಲಿ ಯಾರೇ ಆಗಲೀ ಪೊಲೀಸ್ ಅಧಿಕಾರಿಗಳ ಮುಂದೆ ಹೊಡೆಯಿರಿ ಎನ್ನತಕ್ಕಂಥ ಮಾತುಗಳನ್ನು ಹೇಳತಕ್ಕಂಥದ್ದು ಅಪರಾಧ ಹೌದೋ ಅಲ್ಲವೋ ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಸ್ಪಷ್ಟವಾಗಿ ಹೇಳಿರುತ್ತೆ, ಅಸ್ಪಷ್ಟವಾಗಿ ಹೇಳುವ ಸ್ವಭಾವ ನನ್ನದಲ್ಲ. ಪೊಲೀಸ್ ಸ್ಟೇಷನ್ನಿನಲ್ಲಿ ಏನೇನೋ ವಾದವಿವಾದಗಳು ನಡೆಯುತ್ತವೆ. ಈ ಸಂದರ್ಭದಲ್ಲಿ the discretion of the police officer was that a stern warning was sufficient.

SRI H. T. KRISHNAPPA.—I am not bothered about the action taken by the S. I. I want to know whether-what-he said is not a crime ?

SRI H. M. CHANNABASAPPA.—That is why a warning has been issued.

(ii) re: non Purchase of jowar and hybrid Maize by K. F. & C. S. Corporation in Hassan district.

SRI K. H. HANUME GOWDA (Hassan).—I call the attention of the Minister for Food and Civil Supplies to the trouble experienced by the farmers due to non-purchase of Jowar and Hybrid Maize by the Karnataka Food and Civil Supplies Corpo.ation in Hassan District.

SMT. E. E. VAZ (Minister for Food and Civil Supplies).—Sir, I beg to state as follows :—

The open market prices of jowar and Hybrid Maize in Hassan district during November 1975 were in between Rs. 65/- to Rs. 75/- per quintal and during March 1976, prices were between Rs. 60/- to Rs. 70/- per quintal.

As assured by the Government from time to time the Karnataka Food and Civil Supplies Corporation is purchasing Hybrid Jowar and Maize at the support price of Rs. 74/- per quintal on behalf of the Government. A quantity of 3577.98 quintals of Hybrid Jowar and 1926.69 quintals of maize has been purchased by the Corporation as on 29-3-1976, in Hassan District.

Stocks of jowar and maize of F.A Q. offered by the growers will continue to be purchased by the Corporation at the support price of Rs. 74/- per quintal, subject to quality standards being maintained.

ಶ್ರೀ ಕೆ. ಎಚ್. ಹನುಮೇಗೌಡ.—ಅಧ್ಯಕ್ಷರೇ, ಈ ಫುಡ್ ಕಾರ್ಪೊರೇಷನ್ನಿನವರು ಜವಾರಿ ಮತ್ತು ಮೇಜ್‌ನ್ನು ಕೊಂಡುಕೊಳ್ಳುತ್ತೇವೆಂದು ಹೇಳಿದ ಮೇಲೆ ೩-೪ ತಿಂಗಳ ಹಿಂದೆ ಒಳ್ಳೆಯ ಕ್ವಾಲಿಟಿಯಂನ್ನು ಪರ್ಚೆಜ್ ಮಾಡಿದ್ದು ನಿಜ. ಇದಾದ ಮೇಲಿ ಒಂದು ಕಾಳನ್ನೂ ಪರ್ಚೆಜ್ ಮಾಡತ್ತಾ ಇಲ್ಲ. ಇದಕ್ಕೆ ಸಂಬಂಧಪಟ್ಟ ಮ್ಯಾನೇಜರ್‌ರವರನ್ನೂ ಕಾಂಟ್ಯಾಕ್ಟ್ ಮಾಡಿದೆ. ಡೆಪ್ಯುಟಿ ಕಮಿಷನರ್‌ರವರಿಗೆ ಹೇಳಿದೆ, ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ಹೇಳಿದೆ. ಅವರು ಒಂದು ಸಾರಿ ದುಡ್ಡಿಲ್ಲವೆಂದು ಹೇಳುತ್ತಾರೆ, ಮತ್ತೊಂದು ಸಾರಿ ಗೋಡೌನ್ ಖಾಲಿ ಇಲ್ಲವೆಂದು ಹೇಳುತ್ತಾರೆ, ಮತ್ತೊಂದು ಸಾರಿ ಒಳ್ಳೆಯ ಕ್ವಾಲಿಟಿಯಿಲ್ಲವೆಂದೂ ಕಾರಣ ಹೇಳುತ್ತಾರೆ. ಹೀಗಾಗಿ ಆ ಬಡ ರೈತರು ಪಡಬಾರದ ಕಷ್ಟವನ್ನು ಯಾತನೆಯನ್ನು ಪಡುತ್ತಿದ್ದಾರೆ. ಇದರ ಬಗ್ಗೆ ನಾವು ಎಷ್ಟು ಸಾರ್ತಿ ಹೇಳಿದರೂ ತಮಗೆ ಗೊತ್ತಾಗುತ್ತಿಲ್ಲ. ತಾವು ಬೆಳೆದವರಲ್ಲ ಅದನ್ನು ತಾವೇ ಏನಾದರೂ ಬೆಳೆದಿದ್ದರೆ ತಮಗೆ ಅದರ ಕಷ್ಟವೇನು ಎಂಬುದು ಗೊತ್ತಾಗುತ್ತಿತ್ತು. ಅದಕ್ಕೆ ಏನಾದರೂ ತಾವು ಇದರ ಬಗ್ಗೆ ಡೆಫಿನೆಟ್ ಆಗಿ ವ್ಯವಸ್ಥೆ ಮಾಡುತ್ತೀರಾ ? ಇದೇ ಪರಿಸ್ಥಿತಿ ಬಹಳ ದಿವಸಗಳವರೆಗೆ ಮುಂದುವರಿಸಬೇಕು ಎನ್ನುವ ಆಶಯ ತಮಗೆ ಇದೆಯೇ ? ಆ ರೀತಿ ಇದ್ದರೆ ಅದು ಯೋಗ್ಯವಲ್ಲವೆಂದು ಹೇಳಬೇಕಾಗಿದೆ.

ಶ್ರೀ ಕೊಣಂದೂರು ಲಿಂಗಪ್ಪ.—ನಮ್ಮಲ್ಲಿ ಕೊಳ್ಳುವವರೇ ಇಲ್ಲ, ಆದರೆ ಮಾನ್ಯ ಮಂತ್ರಿಗಳವರು ನಾವು ಕೊಳ್ಳುವುದಕ್ಕೆ ತಯಾರಾಗಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀಮತಿ ಇ. ಇ. ವಾಜ್.—ಮಾನ್ಯ ಹನುಮೇಗೌಡರವರು, ನಮಗೆ ಬೆಳೆದಂಥವರು ಅಲ್ಲವೆಂದು ಹೇಳಿದರು, ಆದರೆ ನಾನು ಕೂಡ ಭತ್ತವನ್ನು ಬೆಳೆಯುತ್ತಿದ್ದೇನೆ. ನನಗೂ ಕೂಡ ಅದರ ಕಷ್ಟ ನಷ್ಟಗಳೇನು ಎಂಬುದು ಗೊತ್ತಿದೆ. ೩೫೭೬.೯೮ ಕ್ವಿಂಟಾಲ್ಸ್ ಹೆ ಬ್ರಿಡ್ಜ್ ಜವಾರ್‌ನ್ನು ಮತ್ತು ೧೯೨೬.೬೨ ಕ್ವಿಂಟಾಲ್ ಮೇಜನ್ನು ಬರೀ ಹಾಸನ ಜಿಲ್ಲೆಯೊಂದರಲ್ಲಿಯೇ ಕೊಂಡುಕೊಂಡಿದ್ದೇವೆ. ನಮ್ಮ ಜಿಲ್ಲಾಧಿಕಾರಿಗಳು ಕೊಟ್ಟ ಮಾಹಿತಿಯ ಪ್ರಕಾರ ಹಾಸನ ಜಿಲ್ಲೆಯಲ್ಲಿ ಧಾನ್ಯದ ಬೆಲೆ ೫೫-೬ ಬೆಲೆ ಹೆಚ್ಚಾಯಿತೆಂದು ಹೇಳಿ ಕೆಲವರು ಮಾರುವುದನ್ನೇ ಬಿಟ್ಟುಬಿಟ್ಟರು.

ಶ್ರೀ ಕೆ. ಎಚ್. ಹನುಮೇಗೌಡ —ದಯಮಾಡಿ ತಾವು ಸರಿಯಾದ ವಿಷಯವನ್ನು ಹೇಳುವ ಹಾಗಿದ್ದರೆ ಹೇಳಿ, ರೇಟ್ಸ್ ಜಾಸ್ತಿಯಾಯಿತೆಂದು ಮಾರುವವರು ಮಾರಲಿಲ್ಲವೆಂದು ಹೇಳಿದಿರಿ. ಆ ರೀತಿ ಹೇಳತಕ್ಕಂಥದ್ದು ಧರ್ಮವೇ ? ನ್ಯಾಯವೇ ? ಇದು ಎಲ್ಲಿಯಾದರೂ ಉಂಟೆ ? ಮಾನ್ಯ ಅಧ್ಯಕ್ಷರೇ, ಒಂದು ಕೆಲಸ ಮಾಡೋಣ, ನಾನು ಹೇಳುವುದು ಸುಳ್ಳು ಆಗಿದ್ದರೆ, ಅಸೆಂಬ್ಲಿಗೇ ಬರುವುದಿಲ್ಲ, ಅವರು ನಿಜವಾಗಿಲ್ಲದೇ ಇದರಲ್ಲಿ ಅವರು ರಾಜೀನಾಮೆ ಕೊಡುತ್ತಾರೆಯೇ ?

ಶ್ರೀಮತಿ ಇ. ಇ. ವಾಜ್.—ಇಲ್ಲಿಗೆ ಬರುವುದು, ಬಿಡುವುದು, ಪ್ರಶ್ನೆ ಬೇಡ. ಬೇಕಾದರೆ ನಾಳೆ ಭಾನುವಾರದ ದಿವಸ ನಿಮ್ಮ ಜಿಲ್ಲೆಗೆ ಹೋಗೋಣ. ಒಳ್ಳೆಯ ಕ್ವಾಲಿಟಿ ಇದ್ದರೆ ಹೂಡಿಸಿ ನಾನು ೭೪ ರೂಪಾಯಿಗಳಿಗೆ ಒಂದು ಕ್ವಿಂಟಾಲ್ ಹಾಗೆ ತೆಗೆದುಕೊಳ್ಳುತ್ತೇನೆ. ಆ ರೀತಿಯಾಗಿ ಒಳ್ಳೆಯ ಕ್ವಾಲಿಟಿ ಇದ್ದರೆ ಕೊಂಡುಕೊಳ್ಳುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಿಸುತ್ತೇನೆ. ಮಾನ್ಯ ಕೊಣಂದೂರು ಲಿಂಗಪ್ಪನವರು ಹೇಳಿದರು, ಆದರೆ ನಾವು ಶಿವಮೊಗ್ಗ ಜಿಲ್ಲೆಯಲ್ಲೂ ಕೂಡ ಕೊಂಡುಕೊಂಡಿದ್ದೇವೆ. ನಾವು ಸ್ವಲ್ಪ ತೆಗೆದುಕೊಂಡು ವರ್ತಕರಿಗೆ ಸ್ವಲ್ಪ ಅನುಕೂಲವಾಗುವಂತೆ ಸರಳ ಪರವಾನೆಯ ಏರ್ಪಾಡು ಮಾಡಿದ್ದೇವೆ. ಆ ರೀತಿ ಎಲ್ಲಿಯಾದರೂ ಕೊಂಡುಕೊಳ್ಳುತ್ತಿಲ್ಲವೆನ್ನುವುದನ್ನು ನನ್ನ ಗಮನಕ್ಕೆ ತನ್ನಿ ಕೂಡಲೇ ಅಲ್ಲಿ ತೆಗೆದುಕೊಳ್ಳುವ ಹಾಗೆ ವ್ಯವಸ್ಥೆ ಮಾಡಿಸುತ್ತೇನೆ.

ಶ್ರೀ ಜಿ. ಎಸ್. ಗುರುಸಿದ್ದಪ್ಪ.—ಸ್ವಾಮಿ ಜವಾರ್‌ನ್ನು ಕೊಂಡುಕೊಳ್ಳುತಕ್ಕಂಥದ್ದನ್ನು ನಿಲ್ಲಿಸಿ ೫ ತಿಂಗಳಾಯಿತು. ೫ ತಿಂಗಳಿಂದ ಈಚೆಗೆ ಅವರು ಒಂದು ಚೀಲವನ್ನೂ ಕೂಡ ಕೊಂಡುಕೊಂಡಿಲ್ಲ. ೭೪ ರೂಪಾಯಿಗಳು ಒಂದು ಕ್ವಿಂಟಾಲ್‌ಗೆ, ಯಾವ ರೈತ ಬೇಕಾದರೂ ಮಾರಬಹುದು ಎಂದು ಹೇಳಿದ್ದರಿಂದ ೮-೧೦ ಗಾಡಿಗಳಲ್ಲಿ ರಾಗಿ ಚೀಲವನ್ನು ತುಂಬಿಕೊಂಡು ರೈತರು ಬಂದಿದ್ದರು. ನಾನು ಅವರನ್ನು ಫುಡ್ ಕಾರ್ಪೊರೇಷನ್ನಿನವರ ಹತ್ತಿರ ಕರೆದುಕೊಂಡು ಹೋಗಿ ಕೊಂಡುಕೊಳ್ಳಿ ಎಂದು ಹೇಳಿದಾಗ ಅವರು ಕ್ವಾಲಿಟಿ ಅಪ್ರೂವ್ ಆಗಬೇಕು, ಅವರು ಬಂದು ನೋಡಬೇಕು, ಇವರು ಬಂದು ನೋಡಬೇಕು ಎಂದು ಹೀಗೆ ಸಬೂಬು ಹೇಳಿದರು. ಆದುದರಿಂದ ಈಗ ಮಂತ್ರಿಗಳವರ ರಿಪೋರ್ಟ್ ಓದಿದ್ದು ಯಾತಾಗ ಬಂದದ್ದು ? ಹೇಗೆ ಬಂದಿತು ಎಂಬುದು ಗೊತ್ತಾಗುತ್ತಿಲ್ಲ ಅವರ ನಿಜಾಂಶವನ್ನು ತಿಳಿದುಕೊಂಡು ಮಂತ್ರಿಗಳವರು ಸೂಕ್ತವಾದ ವ್ಯವಸ್ಥೆ ಮಾಡಬೇಕು, ಮಾಡದೇ ಹೋದರೆ ರೈತರ ಒಂದು ಕೋಪಕ್ಕೆ ತಾವು ಗುರಿಯಾಗಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀಮತಿ ಇ. ಇ. ವಾಜ್.—ಯಾವುದಾದರೂ ಪದಾರ್ಥಗಳನ್ನು ಕೊಂಡುಕೊಳ್ಳತಕ್ಕಂಥ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳೇ ಹೋಗಬೇಕಾಗಿಲ್ಲ. ಅಲ್ಲಿಗೆ ಸ್ಥಳೀಯ ಅಧಿಕಾರಿಗಳು ಇರುತ್ತಾರೆ. ೨-೩ ತಿಂಗಳ ಹಿಂದೆ ಒಳ್ಳೆಯ ಹೈಬ್ರಿಡ್ಜ್ ಜವಾರ್ ಇದ್ದುದನ್ನು ರೈತರು ಮಾರಿ ಬಿಟ್ಟಿದ್ದಾರೆ. ಅವರ ಹತ್ತಿರವಿರತಕ್ಕಂಥದ್ದನ್ನೆಲ್ಲಾ ಮಾರಿ ಆಯಿತು ರಾಗಿ ಒಳ್ಳೆಯ ಕ್ವಾಲಿಟಿ ಮಾರುತ್ತಾರೆಂದು ತಾವು ಹೇಳುವುದಾದರೆ ಅದನ್ನು ಕೊಂಡುಕೊಳ್ಳಲಿಕ್ಕೆ ನಾನು ಸೂಕ್ತ ವ್ಯವಸ್ಥೆ ಮಾಡುತ್ತೇನೆ.

ಹೈಬ್ರಿಡ್ ಬೆಳೆ ಬಂದು ಮೂರು ನಾಲ್ಕು ತಿಂಗಳು ಆಗಿದೆ. ಅದನ್ನು ನಾಲ್ಕೈದು ತಿಂಗಳ ವರಗೆ ಇಡುವ ಹಾಗಿಲ್ಲ. ಅದನ್ನು ಜಾಗ್ರತೆಯಾಗಿ ಮುಗಿಸಬೇಕು. ಈಗ ಅದನ್ನು ತೆಗೆದು ಕೊಳ್ಳುವ ಪ್ರಶ್ನೆ ಬರುವುದಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಮೊದಲೇ ಅದನ್ನು ಕೊಂಡುಕೊಂಡಿದ್ದರೆ ಅದು ಮುಗಿದು ಹೋಗುತ್ತಿತ್ತು. ಅಧ್ಯಕ್ಷರೇ, ಮಾನ್ಯ ಸಚಿವರು ನಮಗೆ ಖಚಿತವಾಗಿ ಉತ್ತರ ಹೇಳಬೇಕು. ಈಗಲೂ ಕೊಂಡುಕೊಳ್ಳುತ್ತೇವೆಂದು ತಾವು ಹೇಳಿದರೆ ಸಾಕು.

ಶ್ರೀಮತಿ ಇ. ಇ. ವಾಜ್.—ನಿಮ್ಮ ಜೊತೆಗೆ ನಾನೂ ಬರುತ್ತೇನೆ ರಾಗಿಯನ್ನು ಈಗಲೂ ಕೊಂಡು ಕೊಳ್ಳುತ್ತೇವೆ.—

ಶ್ರೀ ಕೆ. ಎಚ್. ಹನುಮೇಗೌಡ.—ಹೈಬ್ರಿಡ್ ಜವಾರ್ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀಮತಿ ಇ. ಇ. ವಾಜ್.—ಒಳ್ಳೆಯ ಕ್ವಾಲಿಟಿ ಇದ್ದರೆ ಹೇಳಿ ಕೊಂಡುಕೊಳ್ಳುತ್ತೇನೆ.

ಶ್ರೀ ಅನಿವಾಳರ ನಂಜಪ್ಪ.—ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿಯೂ ರಾಗಿಯ ಕ್ವಾಲಿಟಿಯನ್ನು ನೋಡತಕ್ಕ ಅಧಿಕಾರಿಗಳು ಇದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದರು. ಪ್ರತಿ ತಾಲ್ಲೂಕು ಕೇಂದ್ರಗಳಿಗೆ ಪ್ರತಿದಿವಸ ಮಾಲುಗಳನ್ನು ತೆಗೆದುಕೊಂಡು ಗಾಡಿಗಳು ಬಂದಾಗ ರಾಗಿಯನ್ನು ಸೆಲೆಕ್ಟ್ ಮಾಡುವ ಅಧಿಕಾರಿಗಳಿಗೆ ಫೋನ್ ಮಾಡಿ ಕೇಳಿದಾಗ ಅವರು ಬರುವುದು ಎರಡು ಮೂರು ದಿವಸ ತಡವಾಗುತ್ತದೆ. ರೈತರು ಸೊಸೈಟಿಯ ಹತ್ತಿರ ಅಡಿಗೆ ಮಾಡಿಕೊಂಡು ಇರಬೇಕಾಗುತ್ತದೆ. ಇದರಿಂದ ಹೆಚ್ಚು ತೊಂದರೆ ಅವರಿಗೆ ಆಗುತ್ತದೆ. ಪ್ರತಿ ತಾಲ್ಲೂಕಿಗೂ ಇಂಥಿಂಥ ದಿವಸ ಈ ಅಧಿಕಾರಿಗಳು ಹೋಗಬೇಕು ಎಂದು ಪ್ರೋಗ್ರಾಂ ಹಾಕಿಕೊಂಡು, ಒಂದು ಸರಿಯಾದ ಸಮಯವನ್ನು ನಿಗಧಿ ಮಾಡಿಕೊಂಡು ಕಡ್ಡಾಯವಾಗಿ ತಾಲ್ಲೂಕು ಕೇಂದ್ರಕ್ಕೆ ಹೋಗುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮತಿ ಇ. ಇ. ವಾಜ್.—ಎಲ್ಲಿ ವಾರದ ಸಂತೆಯಾಗುತ್ತದೆಯೋ ಅಂಥ ಕಡೆ ನಮ್ಮ ಅಧಿಕಾರಿಗಳು ಇರುತ್ತಾರೆ. ಇಂಥ ಕಡೆಗಳಲ್ಲಿ ನಮ್ಮ ಅಧಿಕಾರಿಗಳನ್ನು ಸರಿಯಾದ ರೀತಿಯಲ್ಲಿ ಕಳುಹಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡು. ಅವರು ಗೊತ್ತು ಮಾಡಿದ ದಿನದಲ್ಲಿ ಅಲ್ಲದ್ದು ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡುತ್ತೇವೆ.